ಶಿಕ್ಷಣದಿಂದ ಶ್ರೇಷ್ಠತೆ

**ಎಸ್.ಬಿ.ಆರ್.ಆರ್. ಮಹಾಜನ ಪ್ರಥಮದರ್ಜೆಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು– 570 012

ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆ ಹಾಗೂ ನ್ಯಾಕ್‌ನಿಂದ "ಎ" ಶ್ರೇಣಿಯ ಮಾನ್ಯತೆ ಪಡೆದಿದೆ

ಶ್ರೇಷ್ಠತೆಯ ಸಾಮರ್ಥ್ಯವಿರುವಕಾಲೇಜು

---

ದಿನಾಂಕ ೦೯.೦೨.೨೦೨೦

## ಪ್ರಕಟಣೆಯ ಕೃಪೆಗಾಗಿ

***ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ 'ಮಹಮ್–೨೦೨೦' ರ ಸಮಾರೋಪ ಸಮಾರಂಭದಲ್ಲಿ ಪ್ರಸಿದ್ಧ ಕನ್ನಡ ಚಲನಚಿತ್ರ ನಟ ಮುಖ್ಯಮಂತ್ರಿ ಚಂದ್ರು ಅಭಿಮತ***

# ವಿದ್ಯಾರ್ಥಿಗಳಲ್ಲಿ ಯೋಗ ಮುಖ್ಯವಲ್ಲ; ಯೋಗ್ಯತೆ ನಿಮ್ಮನ್ನು ಪ್ರಬುದ್ಧತೆಗೆ ತರುತ್ತದೆ

ಮೈಸೂರು, ಫೆ. ೯ – ಮೈಸೂರಿನ ಪ್ರತಿಷ್ಠಿತ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನ ವತಿಯಿಂದ ಕಾಲೇಜು ಹಬ್ಬ 'ಮಹಮ್ – ೨೦೨೦' ಕಾರ್ಯಕ್ರಮದ ಸಮಾರೋಪ ಸಮಾರಂಭ ದಿನಾಂಕ ೯ನೇ ಫೆಬ್ರವರಿ ೨೦೨೦, ಭಾನುವಾರ ಮಧ್ಯಾಹ್ನ ೩.೦೦ ಗಂಟೆಗೆ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ನೆರವೇರಿತು.

ಸಮಾರೋಪ ಭಾಷಣದಲ್ಲಿ ಪ್ರಸಿದ್ಧ ಚಲನಚಿತ್ರ ನಟರು ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಮಾಜಿ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಮುಖ್ಯಮಂತ್ರಿ ಚಂದ್ರುರವರು ಮಾತನಾಡುತ್ತಾ, ಮಕ್ಕಳಲ್ಲಿ ಅನೇಕ ಪ್ರತಿಭೆಗಳು ಅನಾವರಣಗೊಂಡಿದೆ. ಅವುಗಳನ್ನು ಹೊರಸೂಸಿ, ಬಂದ ಅವಕಾಶಗಳನ್ನು ಉಪಯೋಗಿಸಿಕೊಂಡು ಮುನ್ನಡೆಯಬೇಕು. ಅವಕಾಶಕ್ಕಾಗಿ ಕಾಯಬಾರದು. ಅವಕಾಶಗಳನ್ನು ಹುಡುಕಿ, ಸದುಪಯೋಗಪಡಿಸಿಕೊಳ್ಳಬೇಕು. ಶಿಕ್ಷಣ ನಮ್ಮ ಜೀವನದ ಅವಿಭಾಜ್ಯ ಅಂಗ. ಶಿಕ್ಷಣದಿಂದ ಬದಲಾವಣೆ ಅತ್ಯಗತ್ಯ. ಕಾಲ ದೇಶಗಳನ್ನು ಮೀರಿದ ಸತ್ಯ ಒಂದಿದೆ, ಅದು ಒಳ್ಳೆಯ ಗುಣಗಳು. ಮನುಷ್ಯನಲ್ಲಿ ಪ್ರಾಮಾಣಿಕತನ ಮುಖ್ಯವಾಗುತ್ತದೆ. ಪರಿಪೂರ್ಣ ವ್ಯಕ್ತಿತ್ವಕ್ಕೆ ಮತ್ತು ಸರ್ವಾಂಗೀಣ ಬೆಳವಣಿಗೆಗೆ ಶಿಕ್ಷಣ ಮೂಲವಾಗುತ್ತದೆ. ನಿಮ್ಮ ಭವಿಷ್ಯವನ್ನು ನೀವು ರೂಪಿಸಿಕೊಳ್ಳಬೇಕೆಂದರೆ ಮಾನಸಿಕ ಹಾಗೂ ದೈಹಿಕ ಸಾಮರ್ಥ್ಯ, ಆತ್ಮಸ್ಥೈರ್ಯ ಮತ್ತು ಎಲ್ಲಾ ಕ್ಷೇತ್ರಗಳಲ್ಲೂ ಅತಿ ವೇಗ, ಎತ್ತರ ಹಾಗೂ ದೂರಕ್ಕೆ ಮುನ್ನುಗ್ಗಿ, ಸಾಧನೆ ಮಾಡಿದರೆ ಯಶಸ್ಸು ಖಂಡಿತ ನಿಮ್ಮದಾಗುತ್ತದೆ ಎಂದರು.

ನಂತರ ಮಾತನಾಡಿ, ನಮ್ಮಲ್ಲಿ ಯೋಗ ಮತ್ತು ಯೋಗ್ಯತೆ ಎಂಬುದಿದೆ. ಇಲ್ಲಿ ಯೋಗ ಎಂಬುದು ನಮ್ಮ ಅದೃಷ್ಟ. ಯೋಗ್ಯತೆ ಎಂಬುದು ನಮ್ಮ ಬುದ್ಧಿ ಮತ್ತು ಜ್ಞಾನ. ಯೋಗ ಎಂಬುದು ನಮ್ಮ ಕೈಯಲಿಲ್ಲ. ಆದರೆ ಯೋಗ್ಯತೆಯಿಂದ ನಾವು ಏನ್ನನಾದರೂ ಸಾಧಿಸಬಹುದು. ಯೋಗಕ್ಕೆ ಮಾರುಹೋಗದೆ, ಜ್ಞಾನವನ್ನು ಸಂಪಾದಿಸಿ ಮುಂದೆ ಬನ್ನಿ ಎಂದರು.

ಮುಂದುವರಿದು ಮಾತನಾಡುತ್ತಾ, ಇಂದಿನ ಜಾಗತೀಕರಣ, ಖಾಸಗೀಕರಣ, ಹಾಗೂ ಮಾಹಿತಿ ತಂತ್ರಜ್ಞಾನ ಯುಗದಲ್ಲಿ, ಪ್ರಪಂಚವು ಬದಲಾಗುತ್ತಿದೆ ಹಾಗೇಯೇ ನಮ್ಮ ಜೀವನಶೈಲಿಯು ಮಾರ್ಪಟ್ಟಿದೆ. ಇಂದಿನ ಯುಗ ಬಹಳ ವೇಗದಿಂದ ಮುನ್ನುಗ್ಗುತ್ತಿದೆ, ಕೇವಲ ಓದಿನಿಂದ ಇದು ಸಾಧ್ಯವಿಲ್ಲ. ನೀವು ಕೌಶಲಾಭಿವೃದ್ಧಿ ಜ್ಞಾನವನ್ನು ಸಂಪಾದಿಸಬೇಕು. ಇತ್ತೀಚಿನ ದಿನಗಳಲ್ಲಿ ಖಿನ್ನತೆಗೆ ಒಳಗಾಗುತ್ತಿರುವ ಮಂದಿ ಹೆಚ್ಚಾಗುತ್ತಿದ್ದಾರೆ. ಸಣ್ಣ ಸಣ್ಣ ಸೂಕ್ಷ್ಮ ವಿಚಾರಗಳಿಗೂ ಮನಸ್ಸನ್ನು ಹಾಳು ಮಾಡಿಕೊಳ್ಳದೆ ಧೈರ್ಯದಿಂದ ಮುನ್ನುಗ್ಗಿ, ಕೀಳರಿಮೆಯನ್ನು ಬಿಟ್ಟು, ಸ್ವಾವಲಂಬಿಗಳಾಗಿ, ಕಠಿಣ ಪರಿಶ್ರಮ ಮತ್ತು ಛಲದಿಂದ ನೀವು ಏನನ್ನಾದರೂ ಸಾಧಿಸಬಹುದು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಕನ್ನಡ ಭಾಷೆ ಮತ್ತು ವಿಚಾರದ ಬಗ್ಗೆ ಮಾತನಾಡಿ, ನಮ್ಮ ದೇಶವು ವಿಭಿನ್ನತೆಯಲ್ಲಿ ಏಕತೆಯನ್ನು ಕಾಪಾಡಿಕೊಂಡು ಬಂದಿರುವ ರಾಷ್ಟ್ರ ನಮ್ಮದು. ನಮ್ಮದು ವಿವಿಧ ಭಾಷೆ, ಸಂಸ್ಕೃತಿ, ಮತ್ತು ಪದ್ಧತಿ, ಬದುಕನ್ನು ಹೊಂದಿರುವ ದೇಶ. ಆದರೆ ಸ್ಫರ್ಧೆಗೆ ಭಾಷೆ ಅನ್ವಯಿಸುವುದಿಲ್ಲ. ಯಾವ ಭಾಷೆಯೂ ಶ್ರೇಷ್ಠವೂ ಅಲ್ಲ, ಯಾವ ಭಾಷೆಯೂ ಕನಿಷ್ಠವಲ್ಲ. ಕನ್ನಡಿಗರು ಯಾವುದೇ ಭಾಷೆಗಳ ದ್ವೇಷಿಗಳಲ್ಲ. ಕನ್ನಡಕ್ಕೆ ಸೊಗಸು, ಸೊಗಡು, ಸಂಸ್ಕೃತಿ, ಬದುಕು ಎಲ್ಲವೂ ಇದೆ. ನೀವು ಯಾವುದೇ ಭಾಷೆಯನ್ನು ಕಲಿಯಿರಿ, ಆದರೆ ಕನ್ನಡವನ್ನು ಮರೆಯದಿರಿ. ಎಲ್ಲಾದರೂ ಇರು, ಎಂತಾದರೂ ಇರು ಕನ್ನಡದವನಾಗಿ ಕನ್ನಡವನ್ನು ಉಳಿಸುವಂತವನಾಗು ತಾಯಿನಾಡನ್ನು ಮರೆಯದಿರು, ಎಂದರಲ್ಲದೆ, ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಶುಭ ಕೋರಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕನ್ನಡ ಪ್ರಖ್ಯಾತ ಸಾಹಿತಿಗಳು, ಬೆಂಗಳೂರಿನ 'ಕನ್ನಡ ಶಕ್ತಿ ಕೇಂದ್ರ'ದ ಅಧ್ಯಕ್ಷರಾಗಿರುವ ಶ್ರೀ ರಾ.ನಂ. ಚಂದ್ರಶೇಖರ್‌ರವರು ಮಾತನಾಡುತ್ತಾ, ಯಾವುದೇ ಬದಲಾವಣೆ ಆಗಬೇಕೆಂದರೆ ಅದು ಯುವ ವಿದ್ಯಾರ್ಥಿ ಸಂಘಟನೆಯಿಂದ ಮಾತ್ರ ಸಾಧ್ಯ. ನಮಗೆ ನಮ್ಮ ಭಾಷೆ ಕನ್ನಡ ಮುಖ್ಯವಾಗುತ್ತದೆ. ವಿದ್ಯಾರ್ಥಿಗಳೇ ನಿಮ್ಮಲ್ಲಿ ಕೆಲವು ಜಬಾಬ್ದಾರಿಗಳಿವೆ. ಅವುಗಳಲ್ಲಿ 'ಕನ್ನಡ ಉಳಿಸಿ, ಬೆಳೆಸುವ ಕರ್ತವ್ಯ' ನಿಮ್ಮ ಮೇಲಿದೆ. ಈ ನಾಡಿನ ಸಂಸ್ಕೃತಿಯನ್ನು ಉಳಿಸುವ ಜವಾಬ್ದಾರಿ, ನಿಮ್ಮ ಬದುಕನ್ನು ಕಟ್ಟಿಕೊಳ್ಳುವ ಜವಾಬ್ದಾರಿ ಹಾಗೂ ನಿಮ್ಮನ್ನು ಹೆತ್ತ ತಂದೆ-ತಾಯಿ ಹಾಗೂ ಕುಟುಂಬವನ್ನು ಪೋಷಿಸುವ ಜವಾಬ್ದಾರಿ ನಿಮ್ಮ ಮೇಲಿದೆ. ಇದನ್ನು ಅರಿತು ಆತ್ಮಸ್ಥೈರ್ಯದಿಂದ, ಪ್ರಾಮಾಣಿಕತೆ, ಪಾರದರ್ಶಕತೆಯಿಂದ, ಕಠಿಣ ಶ್ರಮದಿಂದ ದೊಡ್ಡ ಸಾಧನೆ ಮಾಡಿ, ಸಮಾಜವನ್ನು ಕಟ್ಟಿ ಬೆಳೆಸುವ ಕೆಲಸ ಮಾಡಿ ಎಂದು ನುಡಿದು, ಮಹಮ್-೨೦೨೦ ಕಾಲೇಜು ಹಬ್ಬವನ್ನು ಹಮ್ಮಿಕೊಂಡ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಮಹಾಜನ ವಿದ್ಯಾಸಂಸ್ಥೆಯ ಶ್ರೀ ಟಿ. ಮುರಳೀಧರ್ ಭಾಗವತ್ ವಹಿಸಿದ್ದರು. ಸಮಾರಂಭದಲ್ಲಿ ವಿಶೇಷ ಆಹ್ವಾನಿತರಾಗಿ ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್‌ರವರು ಮಹಮ್-೨೦೨೦ರ ಪ್ರಾಯೋಜಕರಿಗೆ ನೆನಪಿನ ಕಾಣಿಕೆ ನೀಡಿ, ಕೃತಜ್ಞತೆಗಳನ್ನು ಸಲ್ಲಿಸಿದರು.

ವೇದಿಕೆಯಲ್ಲಿದ್ದ ಗಣ್ಯರು ಮಹಮ್-೨೦೨೦ರ ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಪ್ರಶಸ್ತಿ, ಬಹುಮಾನ ಹಾಗೂ ನೆನಪಿನ ಕಾಣಿಕೆಗಳನ್ನು ನೀಡಿ ಗೌರವಿಸಿದರು.

ವೇದಿಕೆಯಲ್ಲಿ ಪೂಜಾ ಭಾಗವತ್ ಸ್ಮಾರಕ ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾದ ಪ್ರೊ. ಸಿ. ಕೆ. ರೇಣುಕಾರ್ಯರವರು, ಕಾಲೇಜಿನ ಮುಖ್ಯ ಕಾರ್ಯ ನಿರ್ವಹಣಾ ಆಧಿಕಾರಿ ಡಾ. ಎಸ್. ಆರ್. ರಮೇಶ್, ಕಾಲೇಜಿನ ಪ್ರಾಂಶುಪಾಲರಾದ ಎಸ್. ವೆಂಕಟರಾಮು, ಉಪ ಪ್ರಾಂಶುಪಾಲರಾದ ಶ್ರೀಮತಿ ಬಿ.ಆರ್. ಜಯಕುಮಾರಿ, ಮಹಮ್-೨೦೨೦ರ ಸಂಚಾಲಕರು ಹಾಗೂ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಚ್. ಆರ್. ತಿಮ್ಮೇಗೌಡ, ಮಹಮ್-೨೦೨೦ರ ವಿದ್ಯಾರ್ಥಿ ಸಂಚಾಲಕರಾದ ಶ್ರೀ ರವಿಶಂಕರ್ ಎಸ್ ಉಪಸ್ಥಿತರಿದ್ದರು.

ಶ್ರೀ ಎಸ್. ಆರ್. ಲಕ್ಷ್ಮೀನರಸಿಂಹನ್ ಪ್ರಾರ್ಥಿಸಿದರು. ಮಹಮ್–೨೦೨೦ರ ಸಂಚಾಲಕರು ಹಾಗೂ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಚ್. ಆರ್. ತಿಮ್ಮೇಗೌಡ ಗಣ್ಯರನ್ನು ಸ್ವಾಗತಿಸಿದರು. ಮಹಮ್–೨೦೨೦ರ ವಿದ್ಯಾರ್ಥಿ ಸಂಚಾಲಕರಾದ ಶ್ರೀ ರವಿಶಂಕರ್ ಸಮಾರೋಪ ಸಮಾರಂಭದ ವರದಿ ಓದಿದರು. ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ಶ್ರೀಧರ್ ಎಚ್ ಅವರು ಮಹಮ್–೨೦೨೦ರ ಕಾರ್ಯಕ್ರಮದ ಸರ್ವರನ್ನೂ ವಂದಿಸಿದರು. ವಿದ್ಯಾರ್ಥಿನಿಯರಾದ ಸಿಂಧುನಾಗರಾಜ್ ಮತ್ತು ಪ್ರಣಮ್ಯ ಭಟ್ ಕಾರ್ಯಕ್ರಮ ನಿರೂಪಿಸಿದರು.

ಇದೇ ದಿನ ಸಂಜೆ ೭.೦೦ ಗಂಟೆಗೆ ಮಹಾಜನ ಕಾಲೇಜಿನ ಜಗದೀಶ್ ಪ್ರಸಾದ್‌ಕ್ರೀಡಾಂಗಣದಲ್ಲಿ ಭಾರತದ ಪ್ರಸಿದ್ಧ ಹಾಗೂ ಖ್ಯಾತ ಡಿ.ಜೆ. ಮುಂಬೈನ ಡಿಜೆ ಶಾನ್ ಹಾಗೂ ಡಿಜೆ ಪ್ರಾಚ್‌ಎಂದೇ ಖ್ಯಾತರಾಗಿರುವ ಪ್ರೀತಿ ಚೌಹಾನ್‌ರವರಿಂದ ಪಾಪ್ ಹಾಗೂ ಸಂಗೀತ ರಸಸಂಜೆ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು ಎಂದು ಕಾಲೇಜಿನ ಪ್ರಾಚಾರ್ಯರಾದ ಡಾ. ಎಸ್. ವೆಂಕಟರಾಮು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.